International Journal of Kannada Research
www.kannadajournal.com

ISSN: 2454–5813
IJKR 2024; 10(1): 84-88
© 2024 IJKR
www.kannadajournal.com
Received: 15-11-2023
Accepted: 25-12-2023

ದಿನೇಶ.ಎನ್.ಎನ್
ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. ಕರ್ನಾಟಕ, ಭಾರತ

ಪ್ರೊ.ಕೆ.ಆರ್.ಶಾನಿ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ಕರ್ನಾಟಕ, ಭಾರತ

Corresponding Author:
ದಿನೇಶ.ಎನ್.ಎನ್
ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. ಕರ್ನಾಟಕ, ಭಾರತ

ಜಾಗತೀಕರಣದ ವಿರುದ್ಧ ಕರ್ನಾಟಕ ರಾಜ್ಯ ರೈತ ಸಂಘ ರೂಪಿಸಿದ ಹೋರಾಟಗಳು

ದಿನೇಶ.ಎನ್.ಎನ್. ಪ್ರೊ.ಕೆ.ಆರ್.ಶಾನಿ

ಸಾರಾಂಶ
ಜಾಗತೀಕರಣ ಎಂಬ ಪರಿಕಲ್ಪನೆಯು ಬಹು ರಾಷ್ಟ್ರೀಯ ಕಂಪನಿಗಳು ಆರ್ಥಿಕವಾಗಿ ಲಾಭಗಳಿಸುವ ಯೋಜನೆಯಾಗಿದೆ. ವಿಶ್ವಬ್ಯಾಂಕು ಹಲವು ಸುಧಾರಣೆಗಳನ್ನು ಸೂಚಿಸಿದ್ದು ಅದರಲ್ಲಿ ಬಿತ್ತನೆಬೀಜ, ರಸಗೊಬ್ಬರ ಮತ್ತು ಕೃಷಿ ಉಪಕರಣಗಳ ಮೇಲಿನ ಸಬ್ಸಿಡಿ ತೆಗೆದು ಹಾಕುವುದು ಸಹ ಒಂದಾಗಿದೆ. ಹೀಗಾಗಿ ಅಂತರರಾಷ್ಟ್ರೀಯ ಸಂಸ್ಥೆಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ರಸಗೊಬ್ಬರದ ಬೆಲೆ ಏರಿಕೆ ಮಾಡಿ, ಸಬ್ಸಿಡಿ ತೆಗೆಯುವ ಹುನ್ನಾರ ಮಾಡಿತ್ತು. ಅಮೇರಿಕಾ ಮೂಲದ ಕಾರ್ಗಿಲ್ ಮತ್ತು ಮಾನ್ಸಾಂಟೋ ಬಿತ್ತನೆಬೀಜ ಕಂಪನಿಗಳು, ಕರ್ನಾಟಕದಲ್ಲಿ ಬೆಂಗಳೂರು, ಬಳ್ಳಾರಿ ಮುಂತಾದ ಕಡೆಗಳಲ್ಲಿ ಸ್ಥಾಪಿತವಾದವು. ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಬಿತ್ತನೆ ಬೀಜಗಳನ್ನು ತಿರಸ್ಕರಿಸಿ ಹೋರಾಟ ಮಾಡಿದ 'ಕರ್ನಾಟಕ ರಾಜ್ಯ ರೈತ ಸಂಘ' ಅದಕ್ಕೆ ಪರ್ಯಾಯವಾಗಿ 'ಸ್ವದೇಶಿ ಬೀಜ ಮಾರಾಟ ಚಳುವಳಿ' ರೂಪಿಸಿತು. 'ಕೆಂಚುಕಿ ಫ್ರೈಡ್ ಚಿಕನ್'(ಕೆ.ಎಫ್.ಸಿ.)ಅಮೇರಿಕಾ ಮೂಲದ ಬಹುರಾಷ್ಟ್ರೀಯ ಕಂಪನಿಯ ಚಿಕನ್ ರೆಸ್ಟೋರೆಂಟ್ ಆಗಿದ್ದು, ಭಾರತದಲ್ಲಿ ತನ್ನ ಮೊಟ್ಟಮೊದಲ ಮಳಿಗೆಯನ್ನು 1995ರಲ್ಲಿ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ತೆರೆದಿದ್ದರ ಪರಿಣಾಮ ಆಹಾರದಲ್ಲಿ 'ಮೊನೋಸೋಡಿಯಂ ಗ್ಲುಟಾಮೇಟ್' ಎಂಬ ರಾಸಾಯನಿಕ ಹೆಚ್ಚು ಇದ್ದು ಇದು ಮಾನವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಅದ್ದರಿಂದ ಪ್ರಸ್ತುತ ಈ ಲೇಖನವು ಜಾಗತೀಕರಣದ ವಿರುದ್ಧ ಕರ್ನಾಟಕ ರಾಜ್ಯ ರೈತ ಸಂಘ ರೂಪಿಸಿದ ಹೋರಾಟಗಳ ಕುರಿತು ಚರ್ಚಿಸುತ್ತದೆ.
ಅಧ್ಯಯನದ ಉದ್ದೇಶ: ಕರ್ನಾಟಕ ರಾಜ್ಯ ರೈತ ಸಂಘ ಜಾಗತೀಕರಣದ ವಿರುದ್ಧ ರೂಪಿಸಿದ ಹೋರಾಟಗಳನ್ನು ವಿಶ್ಲೇಷಿಸಲಾಗುವುದು.

ಮುಖ್ಯ ಪದಗಳು: 1991ರ ರಸಗೊಬ್ಬರ ನೀತಿ ವಿರೋಧಿಸಿ ಚಳುವಳಿ, 1993ರ ಗ್ಯಾಟ್ ಒಪ್ಪಂದ–ಡೆಂಕೆಲ್ ಪ್ರಸ್ತಾವನೆ ವಿರೋಧಿ ಚಳುವಳಿ, 1992–93ರ ಕಾರ್ಗಿಲ್ ಬೀಜ ಕಂಪನಿಗಳ ಮೇಲಿನ ದಾಳಿ, 1996ರ ಕೆ.ಎಫ್.ಸಿ. ಮಳಿಗೆ ಮೇಲೆ ಕರ್ನಾಟಕ ರಾಜ್ಯ ರೈತ ಸಂಘದ ಹೋರಾಟಗಳು.

ಪೀಠಿಕೆ

ಜಾಗತೀಕರಣವು ದೇಶದ ಆರ್ಥಿಕತೆಯನ್ನು ಜಗತ್ತಿನ ಆರ್ಥಿಕತೆಯೊಂದಿಗೆ ಜೋಡಿಸುವ ಅರ್ಥವನ್ನು ಸಾಮಾನ್ಯವಾಗಿ ಹೊಂದಿದ್ದರೂ ಅದು ಒಂದು ಸಂಕೀರ್ಣ ಸಂಗತಿಯಾಗಿದೆ. ಇದು ಪರಸ್ಪರಾವಲಂಬನೆ ಮತ್ತು ಸಮನ್ವಯತೆಯಗೆ ವರ್ಗಾವಣೆಯಾಗುವ ಗುರಿಯನ್ನು ಹೊಂದಿರುವ ಹಲವು ನೀತಿಗಳು ಗುಂಪಿನ ಒಂದು ಪ್ರತಿಫಲವಾಗಿದೆ. ವಿಶ್ವವನ್ನು ಪರಸ್ಪರಾವಲಂಬಿಯನ್ನಾಗಿ ಮಾಡುವ ಹಾಗೂ ಒಗ್ಗೂಡುವಿಕೆಯಡೆಗೆ ಪರಿವರ್ತಿಸುವ ವಿವಿಧ ನೀತಿಗಳ ಪರಿಣಾಮವೇ ಜಾಗತೀಕರಣವಾಗಿದೆ. ಇದು ಆರ್ಥಿಕ, ಸಾಮಾಜಿಕ ಮತ್ತು ಭೌಗೋಳಿಕ ಸೀಮೆಗಳನ್ನು ದಾಟಿ ಹೋಗುವ ಜಾಲಗಳ ಸೃಷ್ಟಿ ಮತ್ತು ಚಟುವಟಿಕೆಗಳನ್ನು ಒಳಗೊಂಡಿದೆ. ಜಾಗತೀಕರಣವು, ಸಹಸ್ರ ಮೈಲು ದೂರದಲ್ಲಿ ನಡೆಯುವ ಘಟನೆಗಳಿಂದ ಭಾರತದಲ್ಲಿ ನಡೆಯುವ ಘಟನೆಗಳು ಪ್ರಭಾವಿತವಾಗುವಂತೆ ಸಂಪರ್ಕ ಸೂತ್ರವನ್ನು ಜೋಡಿಸುವ ಪ್ರಯತ್ನ ಮಾಡುತ್ತದೆ. ಇದು ಇಡೀ ವಿಶ್ವವನ್ನು ಅಖಂಡವಾಗಿ ಪರಿವರ್ತಿಸುತ್ತದೆ ಅಥವಾ ಗಡಿರಹಿತ ಪ್ರಪಂಚವನ್ನು ಸೃಷ್ಟಿಸುತ್ತದೆ.
ಜಾಗತೀಕರಣವೆಂದರೆ ಇಡೀ ವಿಶ್ವವೇ ಒಂದು ಗ್ರಾಮವಾಗಬೇಕು ಎಂಬ ಪರಿಕಲ್ಪನೆ. ಆದರೆ ಅದು ಮಾನವ ಕಲ್ಯಾಣಕ್ಕಾಗಿ ರೂಪಿತವಾದುದಲ್ಲ.

ಏಕರೂಪತೆ ಎನ್ನುವುದು ಪ್ರಕೃತಿ ವಿರುದ್ಧವಾದದ್ದು ಅಸಮಾನತೆಯನ್ನು ಪ್ರತಿಪಾದಿಸುವಂಥದ್ದು. ಇಂತಹ ಚಿಂತನೆಯ ಗರ್ಭದಲ್ಲಿ ಜನಿಸಿದ ಜಾಗತೀಕರಣವೆಂಬ ಪರಿಕಲ್ಪನೆಯು ಬಹುರಾಷ್ಟ್ರೀಯ ಕಂಪನಿಗಳು ಆರ್ಥಿಕವಾಗಿ ಲಾಭಗಳಿಸುವ ಯೋಜನೆಯಾಗಿದೆ. ಇದೊಂದು ಬಂಡವಾಳಶಾಹಿ ರಾಷ್ಟ್ರಗಳ ಕುಟಿಲ ತಂತ್ರವಾಗಿದ್ದು, ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಗುಲಾಮರನ್ನಾಗಿ ಮಾಡುವ ನೀತಿಯಾಗಿದ್ದು, ಇದರ ವಿರುದ್ಧ ರೈತ ಸಂಘ ತನ್ನ ಹೋರಾಟಗಳನ್ನು ಮಾಡುತ್ತಾ ಬಂದಿದೆ. ಕೃಷಿ ಕ್ಷೇತ್ರಕ್ಕೆ ಅನ್ವಯಿಸಿ ಹೇಳುವುದಾದರೆ ಕೃಷಿ ಅಗತ್ಯ ವಸ್ತುಗಳು ಹಾಗೂ ಉತ್ಪನ್ನಗಳ ಹಕ್ಕನ್ನು ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಹಿಡಿತದಲ್ಲಿಟ್ಟುಕೊಂಡು ರೈತರನ್ನು ಶೋಷಿಸುವ ನೀತಿ ಇದಾಗಿದೆ. ಭಾರತದಲ್ಲಿ ಜಾಗತೀಕರಣ ಎನ್ನುವುದು 1980ರ ದಶಕದಲ್ಲಿಯೇ ಆರಂಭವಾಗಿದ್ದರೂ ಮುಂದೆ 1990ರ ದಶಕದಲ್ಲಿ ಇದನ್ನು ಅಧಿಕೃತವಾಗಿ ಜಾರಿಗೊಳಿಸಿರುವುದನ್ನು ನಾವು ಕಾಣಬಹುದಾಗಿದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎನ್ನುವುದು ಅದರ ಬೀಜಮಂತ್ರಗಳಾಗಿದ್ದು ಇವು ಆರ್ಥಿಕವಾಗಿ ದುರ್ಬಲವಾಗಿರುವ ಭಾರತಕ್ಕೆ ಸದೃಢತೆಯನ್ನು ತಂದುಕೊಡಬಲ್ಲವೆಂದು ತಿಳಿಸಲಾಗಿದೆ. ಈ ಕಾಲಘಟ್ಟದಲ್ಲಿ ಭಾರತ ದೇಶದ ಹೋರಾಟಗಳು ಆರಂಭಗೊಂಡವು.

1. 1991ರ ರಸಗೊಬ್ಬರ ನೀತಿ ವಿರೋಧಿಸಿ ಚಳುವಳಿ

1991ರಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಭಾರತದ ಕೃಷಿಯು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿದೆ. ಅದರಂತೆ ವಿಶ್ವಬ್ಯಾಂಕು ಹಲವು ಸುಧಾರಣೆಗಳನ್ನು ಸೂಚಿಸಿದ್ದು ಅದರಲ್ಲಿ ಬಿತ್ತನೆಬೀಜ, ಗೊಬ್ಬರ ಮತ್ತು ಕೃಷಿ ಉಪಕರಣಗಳ ಮೇಲಿನ ಸಬ್ಸಿಡಿ ತೆಗೆದು ಹಾಕುವುದು ಸಹ ಒಂದಾಗಿದೆ. ಹೀಗಾಗಿ ಅಂತರರಾಷ್ಟ್ರೀಯ ಸಂಸ್ಥೆಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ರಸಗೊಬ್ಬರದ ಬೆಲೆ ಏರಿಕೆ ಮಾಡಿ, ಸಬ್ಸಿಡಿ ತೆಗೆಯುವ ಹುನ್ನಾರ ಮಾಡಿತ್ತು. ಜೊತೆಗೆ ನೀರಾವರಿ, ವಿದ್ಯುತ್ ಸಬ್ಸಿಡಿಗಳನ್ನು ಕಡಿತಗೊಳಿಸುವ ತಂತ್ರ ರೂಪಿಸಿತ್ತು. ಈಗಾಗಲೇ ಕೃಷಿ ಸಾಗುವಳಿ ವೆಚ್ಚ ಹೆಚ್ಚಾಗಿದ್ದರೂ ಜಾಗತೀಕರಣದಿಂದಾಗಿ ಮತ್ತಷ್ಟು ರೈತ ವಿರೋಧಿ ಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ 'ಕರ್ನಾಟಕ ರಾಜ್ಯ ರೈತ ಸಂಘವು' 1991ರಲ್ಲಿ ಚಳುವಳಿ ಪ್ರಾರಂಭಿಸಿತು.[1] ಈ ಚಳುವಳಿಯ ಅಂಗವಾಗಿ ಆಗ್ರೋ ಕೇಂದ್ರ ಸೇರಿದಂತೆ ಗೊಬ್ಬರ ಕಂಪನಿಗಳ ದಾಸ್ತಾನು ಮಳಿಗೆಗಳಿಗೆ ಮುತ್ತಿಗೆ ಹಾಕಿ ಅಲ್ಲಿರುವ ಗೊಬ್ಬರವನ್ನು ಹಳೆ ಬೆಲೆಯಲ್ಲಿಯೇ ಮಾರಾಟ ಮಾಡುವಂತೆ ಒತ್ತಾಯಿಸಿತು. ದಿನಾಂಕ:12.03.1991ರಂದು ರಸ್ತೆ ತಡೆ, ರೈಲು ತಡೆ ಮೂಲಕ ಪ್ರತಿಭಟಿಸಲಾಯಿತು. ರಾಣೆಬೆನ್ನೂರು, ಹಿರೆಕೆರೂರು ಹಾಗೂ ಚಾಮರಾಜನಗರಗಳಲ್ಲಿ ಈ ಚಳುವಳಿ ಹೆಚ್ಚು ತೀವ್ರವಾಗಿತ್ತು. ದಿನಾಂಕ:02.09.1991ರಲ್ಲಿ ಶ್ರೀನಿವಾಸಪುರದಲ್ಲಿ ರಾಸಾಯನಿಕ ಗೊಬ್ಬರಗಳ ಬೆಲೆಏರಿಕೆ ಮತ್ತು ಅಸಮರ್ಪಕ ವಿದ್ಯುತ್ ಪೂರೈಕೆ ಬಗ್ಗೆ ನಾಲ್ಕೈದು ಸಾವಿರ ರೈತರು ಸೇರಿ ತಹಸೀಲ್ದಾರ್ ಕಛೇರಿ ಬಳಿ ಪ್ರತಿಭಟನೆ ನಡೆಸಿದರು.[2] ಸಹಾಯಧನ ರದ್ದುಪಡಿಸುವ ಸರ್ಕಾರದ ಕ್ರಮದಿಂದಾಗಿ ಕೃಷಿ ಸಾಗುವಳಿ ವೆಚ್ಚ ಹೆಚ್ಚಾಗುತ್ತಿತ್ತು. ಜೊತೆಗೆ ಹೊರ ದೇಶಗಳಿಂದ ಆಮದಾಗುತ್ತಿರುವ ಕೃಷಿ ವಸ್ತುಗಳಿಂದ ಬೆಲೆ ಕುಸಿತಗೊಂಡು ಇದರ ಪರಿಣಾಮವಾಗಿ ರೈತರ ಸಾಲದ ಹೊರೆ ಹೆಚ್ಚುತ್ತಿತ್ತು. ಇದರಿಂದಾಗಿ ರೈತ ಸಂಘ ವೈಜ್ಞಾನಿಕ ಬೆಲೆಗಾಗಿ ಹೋರಾಟ, ಬೆಲೆ ರಕ್ಷಣೆಗಾಗಿ ಹೋರಾಟ, ಸಾಲ ರದ್ದತಿಗಾಗಿ ಹೋರಾಟ, ಸಾಲ ಮತ್ತು ಕರನಿರಾಕರಣೆ ಚಳುವಳಿ, ಆಮದು ವಿರುದ್ಧ ಚಳುವಳಿ ಹಾಗೂ ಬಂದರುಗಳ ಮುತ್ತಿಗೆ ಚಳುವಳಿಯಂತಹ ಹೋರಾಟಗಳನ್ನು ಮಾಡಿತು. ಹಾಗೂ ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರಕ್ಕೆ ಅಡ್ಡಿಯಾಗಿರುವ ವಿಶ್ವವಾಣಿಜ್ಯ ಸಂಸ್ಥೆಯಿಂದ ಹೊರ ಬರುವಂತೆ ಒತ್ತಾಯ ಮಾಡಿತು.[3] ರಸಗೊಬ್ಬರದ ಬೆಲೆಗಳನ್ನು ಕೇಂದ್ರ ಸರ್ಕಾರ ಕೂಡಲೇ ಇಳಿಸದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ರೈತಸಂಘ ನೀಡಿತ್ತು. ಈ ಚಳುವಳಿ 'ಕರ್ನಾಟಕ ರಾಜ್ಯ ರೈತ ಸಂಘ' ಜಾಗತೀಕರಣದ ವಿರುದ್ಧ ನಡೆಸಿದ ಮೊಟ್ಟ ಮೊದಲ ಚಳುವಳಿಯಾಗಿದ್ದು, ಈ ಹೋರಾಟದ ಮೂಲಕ ರೈತ ಸಂಘದ ಹೋರಾಟವು ಸ್ಥಳೀಯ ಹಂತದಿಂದ ಅಂತರರಾಷ್ಟ್ರೀಯ ಹಂತಕ್ಕೆ ವಿಸ್ತಾರಗೊಂಡಿತು.

2. 1993ರ ಗ್ಯಾಟ್ ಒಪ್ಪಂದ-ಡೆಂಕೆಲ್ ಪ್ರಸ್ತಾವನೆ ವಿರೋಧಿ ಚಳುವಳಿ

ಗ್ಯಾಟ್ ಬಹುರಾಷ್ಟ್ರೀಯ ವ್ಯಾಪಾರ ಪದ್ಧತಿಯಲ್ಲಿ ಆಮದು ರಫ್ತು ಸುಂಕಗಳ ಮತ್ತು ವ್ಯಾಪಾರದ ಬಗ್ಗೆ ಮಾಡಿಕೊಳ್ಳುವ ಸಾಮಾನ್ಯ ಒಪ್ಪಂದವಾಗಿದೆ. ಕೃಷಿ ಕ್ಷೇತ್ರಕ್ಕೆ ಅನ್ವಯಿಸಿ ಹೇಳುವುದಾದರೆ ಕೃಷಿ ಅಗತ್ಯ ವಸ್ತುಗಳು ಹಾಗೂ ಉತ್ಪನ್ನಗಳ ಹಕ್ಕನ್ನು ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಹಿಡಿತದಲ್ಲಿಟ್ಟುಕೊಂಡು ರೈತರನ್ನು ಶೋಷಿಸುವ ನೀತಿ ಇದಾಗಿದೆ. ಇದೊಂದು ಊಳಿಗಮಾನ್ಯ ಸ್ವರೂಪದ ಜಮೀನ್ದಾರಿ ವ್ಯವಸ್ಥೆಯ ಆಧುನಿಕ ರೂಪವಾಗಿದ್ದು ರೈತರನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ಅಡಿಯಾಳಾಗಿಸುತ್ತಿತ್ತು.[4] ಇದರಿಂದ ಕೇಂದ್ರ ಸರ್ಕಾರವು ಅಂತರರಾಷ್ಟ್ರೀಯ ವಾಣಿಜ್ಯ ಒಪ್ಪಂದಕ್ಕೆ ಸಹಿಹಾಕುವ ಮೂಲಕ ಹೊರದೇಶದ ಉತ್ಪನ್ನಗಳು ದೇಶಕ್ಕೆ ಆಮದಾಗಿ ಸ್ಥಳೀಯ ಬೆಲೆಗಳು ಮತ್ತಷ್ಟು ಕುಸಿಯುವ ಆತಂಕ ಇತ್ತು. ರೈತರ ಬೆಳೆಗಳಿಗೆ ಬೆಲೆ ಕಡಿಮೆಯಾಗಲು ಭಾರತವು ಅಂತರರಾಷ್ಟ್ರೀಯ ಮಾರುಕಟ್ಟೆಗೆ ತನ್ನನ್ನು ಒಪ್ಪಿಸಿಕೊಳ್ಳುವುದು ಪ್ರಮುಖ ಕಾರಣವಾಗಿತ್ತು. ಇದನ್ನು ಚೆನ್ನಾಗಿ ಗ್ರಹಿಸಿದ 'ಕರ್ನಾಟಕ ರಾಜ್ಯ ರೈತ ಸಂಘ' ಗ್ಯಾಟ್ ಹಾಗೂ ಡೆಂಕಲ್ ಪ್ರಸ್ತಾವನೆ ವಿರುದ್ಧ ಹೋರಾಟ ಆರಂಭಿಸಿತು. ಜಾಗತೀಕರಣ ವಿರುದ್ಧ ಹೋರಾಡಲು ರಾಷ್ಟ್ರಮಟ್ಟದ ರೈತ ಸಂಘಟನೆಗಳನ್ನು ಒಂದುಗೂಡಿಸಲು ರೈತ ಸಂಘ ದಿನಾಂಕ:02.10.1999ರಂದು ಕರ್ನಾಟಕದ ಹೊಸಪೇಟೆಯಲ್ಲಿ ರೈತರ ಬೃಹತ್ ಸಮಾವೇಶವನ್ನು ಏರ್ಪಡಿಸಿತ್ತು. ಟಿಕಾಯತ್, ಶಿವಸ್ವಾಮಿ, ವಂದನಾಶಿವ ಮುಂತಾದವರು ಭಾಗವಹಿಸಿದ್ದ ಈ ಸಮಾವೇಶದಲ್ಲಿ ಪ್ರಪ್ರಥಮ ಬಾರಿಗೆ ಬಿತ್ತನೆಬೀಜ ಸತ್ಯಾಗ್ರಹಕ್ಕೆ ಚಾಲನೆ ನೀಡಲಾಯಿತು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಮಾದರಿಯಂತೆ ಬಿತ್ತನೆಬೀಜ ಸತ್ಯಾಗ್ರಹವನ್ನು ದೆಹಲಿಯಲ್ಲಿ

[1] ರಂಗಸ್ವಾಮಿ.ಎ., (ಪ್ರ.ಸಂ.), ಸತ್ಯನಾರಾಯಣ (ಲೇ), "ಜಾಗತೀಕರಣ ಮತ್ತು ಕರ್ನಾಟಕ", ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2012, ಪುಟಸಂಖ್ಯೆ:37.

[2] ಚಂದ್ರಶೇಖರ್.ಎಸ್, ಸುರೇಂದ್ರರಾವ್.ಬಿ(ಸಂ.)., "ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು", ಸಂಪುಟ-9, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, 2016, ಪುಟಸಂಖ್ಯೆ:210.

[3] ನಂಜುಂಡಸ್ವಾಮಿ.ಎಂ.ಡಿ., "ರೈತ ಚಳುವಳಿ, 2000, ಮತ್ತೆ ಪರ್ಯಾಯ ಸರ್ಕಾರದೆಡೆಗೆ", ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಬೆಂಗಳೂರು, 2000, ಪುಟಸಂಖ್ಯೆ:29-30.

[4] ಭಾರತ ಮತ್ತು ಗ್ಯಾಟ್ ಒಪ್ಪಂದ ಡಂಕಲ್ ಪ್ರಸ್ತಾವನೆ, ಕ್ಷಕಿರಣ, ಕರ್ನಾಟಕ ಸರ್ಕಾರ, 1994, ಪುಟಸಂಖ್ಯೆ:25-37.

ಹಮ್ಮಿಕೊಳ್ಳಲಾಗಿತ್ತು. ಇದಕ್ಕಾಗಿ ಮಾರ್ಚ್ 3 ಮತ್ತು 4ರಂದು ರೈತರ ದೆಹಲಿ ಮುತ್ತಿಗೆ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಬೀಜದ ಮೇಲಿನ ಏಕಸ್ವಾಮ್ಯ, ಬೀಜ ತಯಾರಿಕೆ ಹಾಗೂ ಮಾರಾಟದ ಹಕ್ಕನ್ನು ಉಳಿಸಿಕೊಳ್ಳುವುದು, ಭಾರತದ ಪೇಟೆಂಟ್ ಕಾನೂನು ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸುವುದು. ಬೀಜ ಉತ್ಪಾದನೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ನಿಷೇಧ, ಆಹಾರ ಕ್ಷೇತ್ರದಲ್ಲಿ ವಿಶ್ವ ಮಾರುಕಟ್ಟೆ ವ್ಯವಸ್ಥೆಗೆ ವಿರೋಧ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ದೆಹಲಿ ಮುತ್ತಿಗೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಮಹೇಂದ್ರಸಿಂಗ್ ಟಿಕಾಯತ್ ಆಯೋಜಿಸಿದ್ದರು. ಇದರ ಜೊತೆಗೆ ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಐತಿಹಾಸಿಕ ಸಮಾವೇಶ ಏರ್ಪಡಿಸಲಾಗಿತ್ತು.[5]

ಭಾರತ್ ಕಿಸಾನ್ ಯೂನಿಯನ್, ಆಜಾದಿ ಬಚಾವೋ ಆಂದೋಲನ, ನರ್ಮದಾ ಬಚಾವೋ ಆಂದೋಲನ ಸೇರಿದಂತೆ 15ಕ್ಕೂ ಹೆಚ್ಚು ಸಂಘಟನೆಗಳು ಇದರಲ್ಲಿ ಪಾಲ್ಗೊಂಡಿದ್ದವು. ದಿನಾಂಕ:27.02.1993ರಂದು ಕರ್ನಾಟಕದ ರೈತರು 'ದೆಹಲಿ ಮುತ್ತಿಗೆ' ಹೋರಾಟದಲ್ಲಿ ಪಾಲ್ಗೊಳ್ಳಲು ದೊಡ್ಡ ಪ್ರಮಾಣದಲ್ಲಿ ಹೊರಟು ನಿಂತರು. ಟಿಕೆಟ್ ಇಲ್ಲದೆ ಪ್ರಯಾಣ ಮಾಡಲು ಸಜ್ಜಾಗಿದ್ದ ರೈತರನ್ನು ಬಂಧಿಸಲಾಯಿತು. ಇದರಿಂದ 2,500 ರೈತರು ರೈಲ್ವೆ ನಿಲ್ದಾಣದಲ್ಲಿ ಸೇರಿ ರೈಲ್ವೆ ಅತಿಥಿಗೃಹಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಅಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಮಂಡ್ಯ ಜಿಲ್ಲೆಯ ರೈತ ಸಂಘದ ನಾಯಕರು ಭಾಷಣ ಮಾಡಿ ರೈತರೆಲ್ಲರೂ ತಮಗೆ ಪ್ರವಾಸ ಮಾಡಲು ಸ್ಥಳಾವಕಾಶ ನೀಡುವವರೆಗೆ ಧರಣಿ ಮಾಡಬೇಕೆಂದು ಹೇಳಿದರು. ಪೊಲೀಸರು ದಸ್ತಗಿರಿ ಮಾಡಿದರೆ ರೈತರು ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ರಸ್ತೆ ತಡೆ ಚಳುವಳಿ ನಡೆಸಬೇಕೆಂದು ಕರೆ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ದಿನಾಂಕ:01.03.1993ರ ಕರ್ನಾಟಕದ ವಿಧಾನಸಭಾ ಅಧಿವೇಶನದಲ್ಲಿ ಚರ್ಚೆಯಾಯಿತು. ವೈ.ಕೆ.ರಾಮಯ್ಯ ಮಾತನಾಡಿ ರಾಷ್ಟ್ರದ ಈಗಿನ ಕೃಷಿ ನೀತಿಯಿಂದಾಗಿ ಈ ದೇಶದ ರೈತನಿಗೆ ಕಷ್ಟದಾಗುತ್ತಿದೆ. ಹೀಗಾಗಿ ಡೆಂಕೆಲ್ ಪ್ರಸ್ತಾವನೆ ವಿರುದ್ಧ ಪ್ರತಿಭಟನೆ ಮಾಡಲು ದೆಹಲಿಗೆ ಹೊರಟಿರುವ ರೈತರನ್ನು ಬಂಧಿಸಿ ಜೈಲಿನಲ್ಲಿಡುವ ಬದಲು ರಾಜ್ಯದ ರೈತರ ಬಗ್ಗೆ ಕಾಳಜಿ ಇದ್ದರೆ ಒಂದು ವಿಶೇಷ ರೈಲನ್ನು ಮಾಡಿ ದೆಹಲಿಗೆ ಕಳುಹಿಸುವಂತೆ ಒತ್ತಾಯಿಸಿದರು.[6] ಹೀಗೆ ದೇಶದ ವಿವಿಧೆಡೆಯಿಂದ ದೆಹಲಿಗೆ ಬಂದಿದ್ದ ರೈತರು ಡೆಂಕಲ್ ನೀತಿ ವಿರೋಧಿಸಿ ಅದರ ಪ್ರಸ್ತಾವನೆಯ ಪ್ರತಿಯನ್ನು ಸುಡುವ ಮೂಲಕ ಪ್ರತಿಭಟಿಸಿದರು. ಈ ಸಮಾವೇಶದಲ್ಲಿ ನಂಜುಂಡಸ್ವಾಮಿ, ಶಿವಸ್ವಾಮಿ, ಮಹೇಂದ್ರಸಿಂಗ್ ಟಿಕಾಯತ್, ಮೇಧಾಪಾಟ್ಕರ್, ವಂದನಾಶಿವ ಮುಂತಾದವರು ಪಾಲ್ಗೊಂಡಿದ್ದರು. ಆಮದಿನ ವಿಚಾರದಲ್ಲಿ ಭಾರತವು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ಬೌದ್ಧಿಕ ಆಸ್ತಿಯ ಮೇಲಿನ ಹಕ್ಕು, ಗ್ಯಾಟ್ ಒಪ್ಪಂದದ ಭಾಗವಾಗಬಾರದೆಂದು ಈ ಸಮಾವೇಶವು ಸರ್ಕಾರವನ್ನು ಒತ್ತಾಯಿಸಿತು.

[5] ಸವಿತ.ಬಿ.ಸಿ. "ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪುಟಸಂಖ್ಯೆ:18.

[6] ನಾಗರಾಜ್.ಎಂ.ಜಿ., "ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು", ಸಂಪುಟ–2, ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು, 2006, ಪುಟಸಂಖ್ಯೆ:329–331.

3. 1992–93ರ ಕಾರ್ಗಿಲ್ ಬೀಜ ಕಂಪನಿಗಳ ಮೇಲಿನ ದಾಳಿ

ರೈತ ಸಂಘಟನೆಗಳ ಪ್ರಬಲ ವಿರೋಧದ ನಡುವೆಯೂ ಭಾರತವು ನೂತನ ಆರ್ಥಿಕ ನೀತಿಯನ್ನು ಒಪ್ಪಿಕೊಂಡು ಅಳವಡಿಸಿಕೊಂಡ ಪರಿಣಾಮವಾಗಿ ಹಲವಾರು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಭಾರತವನ್ನು ಪ್ರವೇಶಿಸಿದವು. ಅವುಗಳಲ್ಲಿ ಅಮೇರಿಕಾ ಮೂಲದ ಕಾರ್ಗಿಲ್ ಮತ್ತು ಮಾನ್ಸಾಂಟೋ ಬಿತ್ತನೆಬೀಜ ಕಂಪನಿಗಳು ಪ್ರಮುಖವಾದವು. ಕಾರ್ಗಿಲ್ ಕಂಪನಿ ಕರ್ನಾಟಕದಲ್ಲಿ ಬೆಂಗಳೂರು, ಬಳ್ಳಾರಿ ಮುಂತಾದ ಕಡೆಗಳಲ್ಲಿ ಸ್ಥಾಪಿತವಾಗಿತ್ತು. ಈ ಕಂಪನಿಗಳು ಭಾರತದಲ್ಲಿ ಬೀಜ ಉತ್ಪಾದನೆಯಲ್ಲಿ ತೊಡಗಿ ರೈತರನ್ನು ವಂಚಿಸುತ್ತಿದ್ದವು. ಇವು ದೇಶೀಯ ಬಿತ್ತನೆ ಬೀಜ ಸಂಸ್ಕೃತಿಯನ್ನು ನಾಶ ಮಾಡುವ ಹುನ್ನಾರ ಮಾಡುತ್ತಿದ್ದವು. ಇದರಿಂದಾಗಿ ದೇಶೀಯ ರೈತರು ಹೊರದೇಶಗಳ ಬೀಜ, ಗೊಬ್ಬರ, ಕೀಟನಾಶಕಗಳನ್ನು ಆಶ್ರಯಿಸಿ, ವಿದೇಶಿ ಕಂಪನಿಗಳ ಗುಲಾಮರಾಗಬಹುದಾದ ಅಪಾಯವಿತ್ತು. ಇದನ್ನು ಗಮನಿಸಿದ ಕರ್ನಾಟಕ ರಾಜ್ಯ ರೈತ ಸಂಘ ನೇರ ಕಾರ್ಯಾಚರಣೆಗಿಳಿದಿತ್ತು.

ಬೆಂಗಳೂರಿನ ಸೈಂಟ್ ಮಾರ್ಕ್ಸ್ ರಸ್ತೆ, ಸೋಫಿಯಾಸ್ ಚಾಯ್ಸ್ ಕಟ್ಟಡದಲ್ಲಿ ಇದ್ದ ಕಛೇರಿಯ ಮೇಲೆ ದಿನಾಂಕ:29.12.1992ರಂದು ಸಾವಿರಕ್ಕೂ ಹೆಚ್ಚು ರೈತರು ದಾಳಿ ಮಾಡಿ, ಕಛೇರಿಗೆ ಬೀಗ ಹಾಕಿ ಪ್ರತಿಭಟಿಸಿದರು. ಅದೇರೀತಿ ನಿರ್ಮಾಣ ಹಂತದಲ್ಲಿದ್ದ ಬಳ್ಳಾರಿಯ ಕಾರ್ಗಿಲ್ ಬೀಜ ಉತ್ಪಾದನೆ ಘಟಕದ ಮೇಲೆ 'ಬಳ್ಳಾರಿ ಜಿಲ್ಲಾ ರೈತ ಘಟಕ' 1993ರ ಜುಲೈ 12ರಂದು ದಾಳಿ ಮಾಡಿತು. ಈ ಎಲ್ಲಾ ಹೋರಾಟಗಳ ನಡುವೆ 1993ರ ಅಕ್ಟೋಬರ್ 2ರಂದು ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿ ಅಂತರರಾಷ್ಟ್ರೀಯ ರೈತ ಸಮಾವೇಶವನ್ನು ಏರ್ಪಾಟು ಮಾಡಲಾಗಿತ್ತು. ಹತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯ ರೈತರು ದೇಶದ ನಾನಾ ಭಾಗಗಳಿಂದ ಬಂದು ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ ಶ್ರೀಲಂಕಾ, ಮಲೇಷಿಯಾ, ಜಿಂಬಾಬ್ವೆ, ಇಂಡೋನೇಷಿಯಾ ಸೇರಿದಂತೆ 15 ರಾಷ್ಟ್ರಗಳ ರೈತ ಮುಖಂಡರು ಹಾಗೂ ವಿಜ್ಞಾನಿಗಳು ಪಾಲ್ಗೊಂಡಿದ್ದರು. ಟಿಕಾಯತ್, ವಂದನಾಶಿವ, ಮೇಧಾಪಾಟ್ಕರ್, ಶಿವಸ್ವಾಮಿ ಮುಂತಾದ ರೈತಪರ ಹೋರಾಟಗಾರರು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಬಿತ್ತನೆಬೀಜ ಸತ್ಯಾಗ್ರಹ ಚಳುವಳಿಗೆ ಹೊಸ ರೂಪ ನೀಡಿ ಜಗತ್ತಿನಾದ್ಯಂತ ವ್ಯಾಪಕಗೊಳಿಸುವ ಪ್ರಯತ್ನವನ್ನು ಮಾಡಲಾಯಿತು. ಅದೇ ರೀತಿ ಬೆಂಗಳೂರಿನ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿದ್ದ ಯೂನಿಯನ್ ಕಾರ್ಬೈಡ್‌ಇಂಡಿಯಾ ಲಿಮಿಟೆಡ್ ಎಂಬ ಕಂಪನಿಯ ಮೇಲೆ ಏಪ್ರಿಲ್ 15, 1994 ದಾಳಿ ಮಾಡಿ ಪ್ರತಿಭಟನೆ ಮಾಡಲಾಯಿತು.[7] ರೈತ ಸಂಘದ ಈ ರೀತಿಯ ಹೋರಾಟಗಳು ಕೃಷಿಯಲ್ಲಿ ರೈತರ ಸ್ವಾವಲಂಬನೆ ಹಾಗೂ ಸ್ವದೇಶಿತನವನ್ನು ಉಳಿಸುವ ಆಶಯ ಹೊಂದಿದ್ದವು.

4. ಸ್ವದೇಶಿ ಬೀಜ ಮಾರಾಟ ಚಳುವಳಿ

ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಬಿತ್ತನೆ ಬೀಜಗಳನ್ನು ತಿರಸ್ಕರಿಸಿ ಹೋರಾಟ ಮಾಡಿದ 'ಕರ್ನಾಟಕ ರಾಜ್ಯ ರೈತ ಸಂಘ' ಅದಕ್ಕೆ ಪರ್ಯಾಯವಾಗಿ 'ಸ್ವದೇಶಿ ಬೀಜ ಮಾರಾಟ ಚಳುವಳಿ' ರೂಪಿಸಿತು. ದಿನಾಂಕ:16.04.1994ರಂದು ಬೆಂಗಳೂರಿನಲ್ಲಿ ಈ ಚಳುವಳಿ ನಡೆಯಿತು. ಅಂದು ರಾಜ್ಯಾದ್ಯಂತ ತಾಲ್ಲೂಕು ಹಂತದಲ್ಲಿ ಚಳುವಳಿಯ ಅಂಗವಾಗಿ ಸಾಂಕೇತಿಕ ಪ್ರತಿಭಟನೆಯನ್ನು ಕೈಗೊಳ್ಳುವಂತೆ ರೈತ ಸಂಘ ಕರೆಕೊಟ್ಟಿತ್ತು. ಈ

[7] ದಿನಪತ್ರಿಕೆ., "ಟೈಮ್ಸ್ ಆಫ್ ಇಂಡಿಯಾ", ದಿನಾಂಕ:16.04.1994.

ಹೋರಾಟದ ದಿನದಂದು ರಾಜ್ಯ ಸರ್ಕಾರದ ಅಂದಿನ ಕೃಷಿ ಸಚಿವ ಎಚ್.ಎಂ.ರೇವಣ್ಣನವರಿಗೆ ನಂಜುಂಡಸ್ವಾಮಿ ಸ್ವದೇಶಿ ಬಿತ್ತನೆ ಬೀಜದ ಪೊಟ್ಟಣವನ್ನು ಎರಡು ರೂ.ಗಳಿಗೆ ಮಾರಾಟ ಮಾಡುವ ಮೂಲಕ ಈ ಚಳುವಳಿ ಚಾಲನೆ ನೀಡಿದರು.[8] ಇದರೊಂದಿಗೆ ಬಿತ್ತನೆ ಬೀಜ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಹೋರಾಟವನ್ನು ದೇಶದಾದ್ಯಂತ ವಿಸ್ತರಿಸುವ ಆಲೋಚನೆಯನ್ನು ರೈತ ಸಂಘ ಹೊಂದಿತ್ತು. ಕರ್ನಾಟಕ ರಾಜ್ಯ ರೈತ ಸಂಘ 'ನಮ್ಮದ್ದು ಬ್ರಾಂಡ್' ಎಂಬ ನಾಟಿ ಜೋಳದ ಪ್ಯಾಕೆಟ್ಟನ್ನು ಎರಡು ರೂಪಾಯಿಗಳಿಗೆ ಅಂದು ಮಾರಾಟ ಮಾಡಿತು.

5. 1996ರ ಕೆ.ಎಫ್.ಸಿ. ಮಳಿಗೆ ಮೇಲೆ ದಾಳಿ

ಕೆಂಟುಕಿ ಫ್ರೈಡ್ ಚಿಕನ್ ಅಮೇರಿಕಾ ಮೂಲದ ಬಹುರಾಷ್ಟ್ರೀಯ ಕಂಪನಿಯ ಚಿಕನ್ ರೆಸ್ಟೋರೆಂಟ್ ಆಗಿದ್ದು ಭಾರತದಲ್ಲಿ ತನ್ನ ಮೊಟ್ಟಮೊದಲ ಮಳಿಗೆಯನ್ನು 1995ರಲ್ಲಿ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ತೆರೆದಿತ್ತು. ಅದೇ ರೀತಿ 'ಫಿಜ್ಜಾಹಟ್' ಹಾಗೂ 'ಮ್ಯಾಕ್‌ಡೊನಾಲ್ಡ್' ಮಳಿಗೆಗಳು ಅದೇ ವರ್ಷದ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡಲಿದ್ದವು. ಅಂದಿನ ಸರ್ಕಾರ ವಿದೇಶಿ ಬಂಡವಾಳ ಹೂಡಿಕೆಯ ಹೆಸರಿನಲ್ಲಿ ಇದಕ್ಕೆ ಹೆಚ್ಚಿನ ಒಲವನ್ನು ತೋರಿತ್ತು. ಈ ರೀತಿಯ ಆಹಾರದಲ್ಲಿ 'ಮೊನೋಸೋಡಿಯಂ ಗ್ಲುಟಾಮೇಟ್' ಎಂಬ ರಾಸಾಯನಿಕ ಹೆಚ್ಚು ಇದ್ದು ಇದು ಮಾನವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಅಲ್ಲದೆ ಈ ಆಹಾರ ಸೇವನೆಯಿಂದಾಗಿ ಬೊಜ್ಜು, ರಕ್ತದಲ್ಲಿ ಕೊಲೆಸ್ಟ್ರಾಲ್ ಹೆಚ್ಚಳ ಮತ್ತು ಕ್ಯಾನ್ಸರ್‌ಗೆ ತುತ್ತಾಗುವ ಭೀತಿ ಇತ್ತು. ಅಮೇರಿಕಾದ ಸೆನೆಟ್‌ನ ವರದಿ ಪ್ರಕಾರ ಜಂಕ್ ಫುಡ್‌ನ ಸೇವನೆಯಿಂದಾಗಿ ಅಮೇರಿಕಾದ ಏಳು ಜನರಲ್ಲಿ ಒಬ್ಬ ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವುದು ಸಾಬೀತಾಗಿತ್ತು.[9] ಈ ಎಲ್ಲಾ ಕಾರಣಗಳಿಂದಾಗಿ ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ಕೆ.ಎಫ್.ಸಿ ವಿರುದ್ಧ ಹೋರಾಟ ಪ್ರಾರಂಭಿಸಿತು. ಮಳಿಗೆಯನ್ನು ಮುಚ್ಚುವಂತೆ ಅದರ ಮಾಲಿಕರಿಗೆ ಪತ್ರ ಬರೆದು ಏಳು ದಿನಗಳ ಕಾಲಾವಕಾಶ ನೀಡಲಾಯಿತು. ಇಲ್ಲಿ ರೈತರ ಅಂತಿಮ ವೈರಿ ಹಾಗೂ ಅವರ ವಿರೋಧದ ಗುರಿ ಭಾರತದ ಅರ್ಥವ್ಯವಸ್ಥೆಯನ್ನು ಹಾಳುಗೆಡವುತ್ತಿದ್ದ ಬಹುರಾಷ್ಟ್ರೀಯ ಕಂಪನಿಗಳಾಗಿದ್ದವೇ ವಿನಃ ಕೇವಲ ಕೆಂಟುಕಿ ಫ್ರೈಡ್ ಚಿಕನ್ ಮಳಿಗೆಯಲ್ಲ. ಹೀಗಾಗಿ ಗಾಂಧೀಜಿ ಹುತಾತ್ಮರಾದ ದಿನದ ನೆನಪಿನಲ್ಲಿ ದಿನಾಂಕ:30.01.1996ರಂದು ರೈತ ಸಂಘ ಕೆ.ಎಫ್.ಸಿ ಮಳಿಗೆ ಮೇಲೆ ದಾಳಿ ಮಾಡಿತು. ಈ ಹೋರಾಟದಲ್ಲಿ ಕನ್ನಡ ಪರ ಸಂಘಟನೆಗಳೂ ಭಾಗಿಯಾಗಿದ್ದವು. ಈ ಹೋರಾಟದಲ್ಲಿ ಮಂಡ್ಯ ಜಿಲ್ಲೆಯ ರೈತರೇ ಅಧಿಕ ಸಂಖ್ಯೆಯಲ್ಲಿದ್ದರು ಎಂದು ಮಂಡ್ಯದ ರೈತ ಮಹಿಳಾ ಹೋರಾಟಗಾರರಾದ ಸುನಂದಾ ಜಯರಾಮ್ ಅವರು ದಿನಾಂಕ:28.06.2019ರಂದು ತಿಳಿಸಿರುತ್ತಾರೆ. ಮಳಿಗೆಯಲ್ಲಿದ್ದ ಗ್ರಾಹಕರನ್ನು ಹೊರ ಹೋಗುವಂತೆ ಹೇಳಿ ನಂತರ ಮಳಿಗೆಗೆ ಮುತ್ತಿಗೆ ಹಾಕಲಾಯಿತು. ಪ್ರತಿಭಟನೆಯ ನಂತರ ಘೋಷಣೆ ಕೂಗುತ್ತಾ ವಿಧಾನಸೌಧದತ್ತ ಮೆರವಣಿಗೆ ಸಾಗುತ್ತಿದ್ದ ಪ್ರತಿಭಟನಾಕಾರರನ್ನು ಸರ್ಕಾರ ಬಂಧಿಸಿ ಸೆಂಟ್ರಲ್ ಜೈಲಿನಲ್ಲಿ ಇಟ್ಟಿತು.[10] ಈ ರೀತಿಯ ಹೋರಾಟಕ್ಕೆ ಪರಿಸರವಾದಿ ಮೇನಕಾ ಗಾಂಧಿ, ವಂದನಾಶಿವ ಮುಂತಾದವರು ಬೆಂಬಲ ವ್ಯಕ್ತಪಡಿಸಿದ್ದರು.

ಅಮೇರಿಕಾ ಮೂಲಕ 'ಕೊಜೆಂಟ್ರಿಕ್' ಸಂಸ್ಥೆ ಉಡುಪಿಯ ಬಳಿ ಇರುವ ನಂದಿಕೂರಿನಲ್ಲಿ ವಿದ್ಯುತ್ ಸ್ಥಾವರ ಸ್ಥಾಪಿಸುವ ಉದ್ದೇಶ ಹೊಂದಿತ್ತು. 1992ರಲ್ಲೇ ಈ ಯೋಜನೆಯ ಬಗ್ಗೆ ಮಾತು ಕೇಳಿ ಬಂದವು. ಈ ಯೋಜನೆಗಾಗಿ 1000 ಎಕೆರೆ ಕೃಷಿ ಭೂಮಿ ಮತ್ತು ಸುಮಾರು 540 ಕುಟುಂಬಗಳು ಮನೆ ಹಾಗೂ ಭೂಮಿಯನ್ನು ಕಳೆದುಕೊಳ್ಳುವ ಭೀತಿಗೆ ಒಳಗಾದವು. ಇದರಿಂದ ಪರಿಸರಕ್ಕೂ ಧಕ್ಕೆಯಾಗುತ್ತಿತ್ತು. ಹೀಗಾಗಿ ಇದರ ವಿರುದ್ಧ 1996ರಲ್ಲಿ ನಡೆದ ಹೋರಾಟದಲ್ಲಿ ಪರಿಸರವಾದಿ ಮೇನಕಾ ಗಾಂಧಿ, ರೈತ ಸಂಘದ ನಂಜುಂಡಸ್ವಾಮಿ ಮತ್ತಿತ್ತರ ನಾಯಕರು ಮತ್ತು ಸ್ಥಳೀಯ ರೈತರು ಪಾಲ್ಗೊಂಡರು.[11] ಇದರ ಪರಿಣಾಮವಾಗಿ ಈ ಯೋಜನೆ ಸ್ಥಗಿತಗೊಂಡಿತು. 1996 ನವೆಂಬರ್ 5 ರಂದು ಬೆಂಗಳೂರಿನಲ್ಲಿ ನಡೆದ ವಿಶ್ವ ಸುಂದರಿ ಸ್ಪರ್ಧೆ ವಿರುದ್ಧ ಪ್ರತಿಭಟಿಸಿದ ರೈತ ಸಂಘ ಈ ಕಾರ್ಯಕ್ರಮವನ್ನು ರದ್ದು ಮಾಡುವಂತೆ ಒತ್ತಾಯಿಸಿ, ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಿಂದ ಮಹಾತ್ಮಗಾಂಧಿ ಪ್ರತಿಮೆಯವರಗೆ ಮೆರವಣಿಗೆ ಮಾಡಿ, ಧರಣಿ ನಡೆಸಿತು. ಇದೇ ರೀತಿ 1996ರ ನವೆಂಬರ್‌ನಲ್ಲಿ ರೋಮ್‌ನಲ್ಲಿ ವಿಶ್ವ ಆಹಾರ ಸಂಸ್ಥೆಯ ನೇತೃತ್ವದಲ್ಲಿ ನಡೆದಿದ್ದ ವಿಶ್ವ ಆಹಾರ ಸಮ್ಮೇಳನದ ವಿರುದ್ಧ ಪ್ರತಿಭಟನೆ, ರೈತರ ಹಕ್ಕುಗಳನ್ನು ಪ್ರತಿಪಾದಿಸಲು ದಿನಾಂಕ 30.01.1997ರಲ್ಲಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಸಮಾವೇಶ ಹಾಗೂ ಬಹುರಾಷ್ಟ್ರೀಯ ಕಂಪನಿಗಳನ್ನು ದೇಶದಿಂದ ಹೊರ ಹಾಕಲು ದೆಹಲಿಯ ಕೆಂಪುಕೋಟೆ ಮೈದಾನದಲ್ಲಿ 1998 ಸೆಪ್ಟೆಂಬರ್ 21ರಂದು ನಡೆದ ಅಖಿಲ ಭಾರತ ರೈತ ಸಮಾವೇಶ, 1998ರಲ್ಲಿ ಬಿ.ಟಿ.ಹತ್ತಿ ಕಂಪನಿ ಮಾನ್ಸಾಂಟೋ ವಿರುದ್ಧ ಆಪರೇಷನ್ ಕ್ರಿಮೇಷನ್ ಮಾನ್ಸಾಂಟೋ, ಅಮೇರಿಕಾದ ಸಿಯಾಟಲ್‌ನ ಮೂರನೇ ಶೃಂಗಸಭೆ ವಿರೋಧಿಸಿ 1999 ನವೆಂಬರ್ 30ರಂದು ಬೆಂಗಳೂರಿನ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಯಿತು. ವಿವಿಧ ತಳಿಗಳ ರಕ್ಷಣೆ ಕಾಯ್ದೆ–2000 ಖಂಡಿಸಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಿನಾಂಕ:02.10.2000ರಂದು ಸಮಾವೇಶ ನಡೆಸಿತು. ಜೊತೆಗೆ 'ಲಾವಿಯಾ ಕ್ಯಾಂಪಸೀನಾ' ಮೂರನೇ ವಿಶ್ವ ಸಮ್ಮೇಳನವನ್ನು ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಅಕ್ಟೋಬರ್ 3 ರಿಂದ 6 ರವರೆಗೆ ಆಯೋಜಿಸಿದ್ದು, ಕೃಷಿ ಆಮದು ನೀತಿ ವಿರೋಧಿಸಿ ಕಾಶ್ಮೀರ ಹಾಗೂ ಕನ್ಯಾಕುಮಾರಿಯಲ್ಲಿ ಏಕಕಾಲದಲ್ಲಿ ದಿನಾಂಕ:19.01.2001ರಿಂದ ದಿನಾಂಕ:19.02.2001ರವರೆಗೆ ಆಯೋಜಿಸಿದ್ದ ಬಂಡಿಯಾತ್ರೆಯ ಸಂದರ್ಭದಲ್ಲಿ ಡೆಂಕಲ್ ಪ್ರಸ್ತಾವನೆ, ಗ್ಯಾಟ್ ಒಪ್ಪಂದ, ಡಬ್ಲ್ಯೂ.ಟಿ.ಓ ಇವುಗಳಿಂದ ಭಾರತೀಯ ರೈತರ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ಕುರಿತು ಜಾಗೃತಿ ಮೂಡಿಸಿತು. ಹಾಗೂ ವಿಶ್ವ ರೈತ ಹುತಾತ್ಮರ ದಿನದಂದು ಸೆಪ್ಟೆಂಬರ್–10, 2003ರಲ್ಲಿ 'ವಿಶ್ವವ್ಯಾಪಾರ ಸಂಸ್ಥೆಯಿಂದ ಹೊರಬನ್ನಿ' ಎಂಬ ಒತ್ತಾಯದೊಂದಿಗೆ ವಿಶ್ವವ್ಯಾಪಾರ ಸಂಘಟನೆಯ ಕ್ಯಾನ್‌ಕಾನ್ ಸಮ್ಮೇಳನ ವಿರೋಧಿಸಿ ಬೆಂಗಳೂರಿನ ಮಹಾತ್ಮಾಗಾಂಧಿ ಪ್ರತಿಮೆ ಎದುರು ಪ್ರತಿಭಟನೆ

---

8 ದಿನಪತ್ರಿಕೆ, "ಸಂಯುಕ್ತ ಕರ್ನಾಟಕ", ದಿನಾಂಕ:17.04.1994.

9 ದಿನಪತ್ರಿಕೆ, "ದಿ ಹಿಂದೂಸ್ತಾನ್ ಟೈಮ್ಸ್", ದಿನಾಂಕ: 01.08.1995.

10 ಅಗ್ರಹಾರ ಕೃಷ್ಣಮೂರ್ತಿ (ಸಂ)., "ಸಂಸ್ಕೃತಿ ಕಥನ", ಕನ್ನಡ ಪುಸ್ತಕ ಪ್ರಾಧಿಕಾರ, 2002, ಪುಟಸಂಖ್ಯೆ:261–262.

11 ಮೋಹನ ಕೃಷ್ಣ ರೈ.ಕೆ., "ಪರಿಸರ ಚಳುವಳಿಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018, ಪುಟಸಂಖ್ಯೆ:183–184.

ಮಾಡಿತು. ಹೀಗೆ ಬಿಡುವಿಲ್ಲದ ಹೋರಾಟ ಹಾಗೂ ಪ್ರತಿಭಟನೆಗಳನ್ನು 'ಕರ್ನಾಟಕ ರಾಜ್ಯ ರೈತ ಸಂಘ' ಮಾಡುತ್ತಾ ಬಂದಿತು.

1996ರ ಏಪ್ರಿಲ್‌ನಲ್ಲಿ ಮೆಕ್ಸಿಕೋದ ಟ್ಲಾಕ್ಸ್‌ಕಾಲದಲ್ಲಿ ನಡೆದ ಲಾವಿಯಾ ಕ್ಯಾಂಪೆಸಿನಾಗೆ ಆಹ್ವಾನದ ಮೇಲೆ ತೆರಳಿದ್ದ ನಂಜುಂಡಸ್ವಾಮಿ ಅವರಿಗೆ ಈ ಸಮ್ಮೇಳನ ಜಾಗತಿಕ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿತು. ಸರ್ವಾನುಮತದ ಮೇರೆಗೆ ಅಂತರರಾಷ್ಟ್ರೀಯ ರೈತ ಚಳುವಳಿಯ ದಕ್ಷಿಣ ಏಷ್ಯಾದ ಕೋ ಆರ್ಡಿನೇಟರ್ ಆಗಿ ಅವರು ನೇಮಕಗೊಂಡರು. ಹೀಗಾಗಿ ಅವರು ಪದೇ ಪದೇ ವಿದೇಶ ಪ್ರವಾಸ ಮಾಡುವುದು ಅನಿವಾರ್ಯವಾಗಿತ್ತು. ಇದು ಕರ್ನಾಟಕ ರಾಜ್ಯ ರೈತ ಸಂಘದ ಹಲವರ ಕೋಪಕ್ಕೆ ಕಾರಣವಾಗಿ ಕರ್ನಾಟಕ ರಾಜ್ಯ ರೈತ ಸಂಘ ಅಧ್ಯಕ್ಷರು ಹೆಚ್ಚಾಗಿ ಅಂತರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಮಾತ್ರ ಹೆಚ್ಚು ಗಮನ ಹರಿಸುತ್ತಿದ್ದಾರೆ. ಮತ್ತು ಸ್ಥಳೀಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ ನಂಜುಂಡಸ್ವಾಮಿಗೆ ಫಾರಿನ್ ಹುಚ್ಚು ಎಂಬ ಆಪಾದನೆಯನ್ನು ಎದುರಿಸಬೇಕಾಯಿತು. ಒಟ್ಟಾರೆ ರೈತ ಸಂಘದ ಈ ಎಲ್ಲಾ ಈ ಎಲ್ಲಾ ಹೋರಾಟಗಳು ಜಾಗತೀಕರಣದ ವಿರೋಧಿ ನೆಲೆಯಲ್ಲಿ ನಡೆದಿರುವುದನ್ನು ನೋಡಬಹುದಾಗಿದೆ.

ಉಪಸಂಹಾರ

ರೈತ ಸಮಸ್ಯೆಗಳಿಗೆ ಪ್ರತಿಭಟನೆಗಳ ಮೂಲಕ ಪರಿಹಾರ ಸಾಧ್ಯವಿತ್ತು. ಇಂದು ಸಮಸ್ಯೆಗಳು ಜಾಗತಿಕವಾಗಿ ವಿಸ್ತಾರಗೊಂಡಿವೆ. ಆದುದರಿಂದ ಚಳುವಳಿಗಳು ಹಿಂದಿಗಿಂತ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯತೆ ಇದೆ. ಅಧಿಕಾರ ಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಒಡ್ಡುವ ಸವಾಲುಗಳಿಗೆ ಸೃಜನಶೀಲ ಆಯಾಮದಲ್ಲಿ ಉತ್ತರ ಕಂಡುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ರೈತ ಚಳುವಳಿ ಸಾಗಬೇಕಾಗಿದೆ. ಆದರೂ 1980ರ ನಂತರದ ಕರ್ನಾಟಕದಲ್ಲಿ ನಡೆದ ಬಹುಪಾಲು ರೈತ ಚಳುವಳಿಗಳಿಗೆ ಕರ್ನಾಟಕ ರಾಜ್ಯ ರೈತ ಸಂಘವು ನೇತೃತ್ವ ವಹಿಸಿ ತನ್ನದೇ ಪರಿಧಿಯೊಳಗೆ ರೈತರ ಪರವಾಗಿ ಹೋರಾಡುತ್ತಾ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತಾ ಬಂದಿರುವುದನ್ನು ಈ ಲೇಖನದ ಮೂಲಕ ವಿಶ್ಲೇಷಿಸಲಾಗಿದೆ.

ಪರಾಮರ್ಶನ ಗ್ರಂಥಗಳು

1. ರಂಗಸ್ವಾಮಿ.ಎ., (ಪ್ರ.ಸಂ.), ಸತ್ಯನಾರಾಯಣ (ಲೇ), "ಜಾಗತೀಕರಣ ಮತ್ತು ಕರ್ನಾಟಕ", ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2012.
2. ಚಂದ್ರಶೇಖರ್.ಎಸ್, ಸುರೇಂದ್ರರಾವ್.ಬಿ, "ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು", ಸಂಪುಟ–9, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, 2016.
3. ನಂಜುಂಡಸ್ವಾಮಿ.ಎಂ.ಡಿ., "ರೈತ ಚಳುವಳಿ, 2000, ಮತ್ತೆ ಪರ್ಯಾಯ ಸರ್ಕಾರದೆಡೆಗೆ", ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಬೆಂಗಳೂರು, 2000.
4. ಭಾರತ ಮತ್ತು ಗ್ಯಾಟ್ ಒಪ್ಪಂದ ಡಂಕಲ್ ಪ್ರಸ್ತಾವನೆ, ಕ್ಷಕಿರಣ, ಕರ್ನಾಟಕ ಸರ್ಕಾರ, 1994.
5. ಸವಿತ.ಬಿ.ಸಿ. "ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
6. ನಾಗರಾಜ್.ಎಂ.ಜಿ., "ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು", ಸಂಪುಟ–2, ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು, 2006.
7. ಅಗ್ರಹಾರ ಕೃಷ್ಣಮೂರ್ತಿ (ಸಂ)., "ಸಂಸ್ಕೃತಿ ಕಥನ", ಕನ್ನಡ ಪುಸ್ತಕ ಪ್ರಾಧಿಕಾರ, 2002.
8. ಮೋಹನ ಕೃಷ್ಣ ರೈ.ಕೆ., "ಪರಿಸರ ಚಳುವಳಿಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018.
9. ಕನ್ನಡ ವಿಷಯ ವಿಶ್ವಕೋಶ (ಜಾನಪದ), ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪ್ರಕಾಶನ